ಕವಿಗಳ ಒರೆಗಲ್ಲು ಎಂಬುದನ್ನು ಸಾಬೀತು ಮಾಡುವಂತೆ ಬರೆದ ಕೃತಿ. ಮೇಲ್ನೋಟಕ್ಕೆ ಅದರ ಸಂವಿಧಾನ ಜಟಿಲ; ಗ್ರಹಿಕೆ ಕಷ್ಟ ಎನಿಸಿದರೂ, ಸಂಪೂರ್ಣ ಗದ್ಯರೂಪದಲ್ಲಿರುವ ಕಾದಂಬರಿಯ ಕಥನ, ಅದರ ಅರ್ಥವಿಸ್ತಾರ, ರಸ ಪ್ರತಿಪಾದನೆ, ವರ್ಣನಾವೈಖರಿ, ವಾಗ್ವಿಲಾಸ–ಇವುಗಳನ್ನು ಅಭೂತಪೂರ್ವವೆಂದು ಒಪ್ಪಿದವರು ಹೇಳಿದ ಮಾತಿದು: 'ಬಾಣೋಚ್ಛಿಷ್ಟಂ ಜಗತ್ ಸರ್ವಂ'. ಅಂದರೆ, ಅವನ ಅನಂತರ ಬಂದ ಕವಿಗಳು ಬರೆದದ್ದು ಬಾಣ ಬರೆದು ಉಳಿದದ್ದು!

ಕಾದಂಬರಿಯ ಮೂಲ ಎಳೆಗಳು ಗುಣಾಢ್ಯನ ಬೃಹತ್ಕತೆಯಲ್ಲಿದ್ದರೂ, ಕಥಾಸರಿತ್ಸಾಗರದ ಮಕರಂದಿಕೋಪಾಖ್ಯಾನವೇ ಅದರ ಆಕರ ಎನ್ನಲಾಗಿದೆ. ಆದರೂ, ಶ್ರೇಷ್ಠ ಕವಿ ಎನಿಸಿದ ಬಾಣನ ಹೆಣಿಗೆಯಲ್ಲಿ ಮೂಡಿರುವ ಆಕೃತಿಯ ಚೆಲುವು ನವೀನವಾದುದು. ಪದ್ಯ ರಚನೆಗೆ ಕಾಳಿದಾಸ ಹೇಗೋ ಹಾಗೇ ಗದ್ಯ ರಚನೆಯಲ್ಲಿ ಬಾಣನಿಗೆ ಅತ್ಯುನ್ನತ ಸ್ಥಾನವಿದೆ. ವಿಪರ್ಯಾಸವೆಂದರೆ ಕಾದಂಬರಿಯ ಮುಕ್ಕಾಲು ಭಾಗ ಮುಗಿದಿದ್ದಾಗ ಆತ ಅಕಾಲ ಮರಣಕ್ಕೆ ತುತ್ತಾಗುತ್ತಾನೆ; ಕೃತಿಯ ಉತ್ತರಾರ್ಧವನ್ನು ಆತನ ಮಗ ಭೂಷಣಭಟ್ಟ ಪೂರ್ಣಗೊಳಿಸುತ್ತಾನೆ. ಆತನೂ ಕವಿಯಾಗಿದ್ದರಿಂದ ಬಾಣನ ಕಲ್ಪನಾ ಶಕ್ತಿ, ಬರವಣಿಗೆಯ ಹದ ತಪ್ಪಿಲ್ಲ. ಬಾಣಭಟ್ಟ ನಿಸರ್ಗದ ಬಹುಮುಖ ವ್ಯಾಪಾರಗಳನ್ನು, ವ್ಯಕ್ತಿಯ ಸೂಕ್ಷ್ಮ ಭಾವಗಳನ್ನು ವರ್ಣಿಸುವ ಅದ್ಭುತ ಪ್ರತಿಭಾವಂತ. ಪ್ರತಿಭೆ–ವ್ಯುತ್ಪತ್ತಿ ಸಮಾನವಾಗಿ ಬೆರೆತಿರುವ ಕವಿ; ಹುಟ್ಟು ಕತೆಗಾರ. ಸ್ವಾರಸ್ಯಪೂರ್ಣವಾದ ಕಥಾ ನಿರೂಪಣೆ, ಚಿತ್ತಾಕರ್ಷಕ ವರ್ಣನೆಗಳ ಜಾಲವೇ ಅವನ ಕಾವ್ಯದಲ್ಲಿ ಹುದುಗಿದೆ. ಇದು ಕೆಲವೊಮ್ಮೆ ಅತಿಗೆಹೋಗಿ ಅಲಂಕಾರ, ಶ್ಲೇಷೆಗಳ ಗೋಜಲುಗಳು ಸಂಭವಿಸಿದರೂ, ಆ ಲೋಪಗಳನ್ನು ಮರೆಮಾಚುವಷ್ಟು ಅತ್ಯಂತ ಮನೋಹರವಾದ ಸನ್ನಿವೇಶಗಳಿವೆ.

ಪ್ರಾಚೀನ ಕನ್ನಡ ಕವಿಗಳು ಸಂಸ್ಕೃತ ಕಾವ್ಯಗಳನ್ನು ಪರಿವರ್ತಿಸಿದರೆ, ಕೆಲವರು ಕಾವ್ಯವಸ್ತುವನ್ನು ಬೇರೆಬೇರೆ ಆಕರಗಳಿಂದ ಸಂಗ್ರಹಿಸಿ ಹೊಸಕಾವ್ಯಗಳನ್ನು ರಚಿಸಿದರು. 'ಕರ್ಣಾಟಕ ಕಾದಂಬರಿ' ಬಾಣನ ಕಥಾಕಾವ್ಯದ ಪರಿವರ್ತನೆಯೇ ಹೊರತು ಯಥಾವತ್ತಾದ ಭಾಷಾಂತರವಲ್ಲ. ಅದರ ಕರ್ತೃ ಒಂದನೆಯ ನಾಗವರ್ಮ. ಆತನ ಮತ್ತೊಂದು ಕೃತಿ 'ಛಂದೋಂಬುಧಿ' ಎಂಬ ಲಕ್ಷಣ ಗ್ರಂಥ. ಹೀಗಾಗಿ, ಆತ ಶಾಸ್ತ್ರಜ್ಞ; ಸತ್ಕವಿ. ಹತ್ತನೆಯ ಶತಮಾನದ ಕೊನೆ ಮತ್ತು ಹನ್ನೊಂದನೆಯ ಶತಮಾನದ ಆರಂಭದಲ್ಲಿದ್ದ ಆತ ಸ್ವ–ವಿಚಾರಗಳನ್ನು ಹೆಚ್ಚು ಹೇಳಿಕೊಂಡಿಲ್ಲ. ಅವನ ಎರಡು ಗ್ರಂಥಗಳಲ್ಲಿನ ಮಾಹಿತಿಗಳನ್ನು ಆಧರಿಸಿ ವಿದ್ವಾಂಸರು ಕೆಲವು ಸಂಗತಿಗಳನ್ನು ಊಹಿಸಿದ್ದಾರೆ:

ಕೃತಿಪತಿ ನರೇಂದ್ರ ಚಂದ್ರಂ।ಕೃತಿಯಂ ಪೇೞ್ದಂ ಬುಧಾಬ್ಜವನಕಳಹಂಸಂ
ಕೃತಿ ಕಾದಂಬರಿಯೆನೆಸ।ತ್ಕೃತಿಕಥಿತ ಕಥಾವತಾರಮೇಂ ಕೇವಳಮೇ

ನಾಗವರ್ಮನ ಪೂರ್ವಜರು ವೆಂಗಿಮಂಡಳದ ವೆಂಗಿಪಳು ಗ್ರಾಮದ ವಿದ್ವಾಂಸರು; ವೈದಿಕ ಬ್ರಾಹ್ಮಣರು. ಆತನ ತಂದೆ ವೆಣ್ಣಮಯ್ಯ; ತಾಯಿ ಪೋಲಕಬ್ಬೆ. ಚಂದ್ರನೆಂಬುವನು ಆಶ್ರಯ ನೀಡಿದ್ದನೆಂದೂ, 'ಕವಿರಾಜಹಂಸ', 'ಬುಧಾಬ್ಜವನ ಕಳಹಂಸ' ಎಂಬ ಬಿರುದುಗಳಿದ್ದವು. ಕಾವ್ಯದ ಕೊನೆಯಲ್ಲಿ ಭೋಜರಾಜನು ಕಳಿಂಗ, ಕಾಂಭೋಜ, ಬಾಹ್ಲೀಕ ದೇಶದ ಅಶ್ವಗಳನ್ನು ಕೊಟ್ಟನೆಂದು ಹೇಳಿರುವುದರಿಂದ, ನಾಗವರ್ಮ ಪಂಪ, ಚಾವುಂಡರಾಯರಂತೆ ಯುದ್ಧ ವೀರನಾಗಿರಬೇಕು. ಧಾರವಾಡ ಜಿಲ್ಲೆಯ ಸಯ್ಯಡಿ ಗ್ರಾಮದವನು ಎಂದಿರುವುದರಿಂದ ರನ್ನನ ಸಮಕಾಲೀನನೂ ಹೌದು. ಈ ಎಲ್ಲಾ ಹಿನ್ನೋಟಗಳಲ್ಲಿ ಕರ್ಣಾಟಕ ಕಾದಂಬರಿಯನ್ನು ಪರಿಭಾವಿಸಬೇಕಾಗುತ್ತದೆ.

ನಾಗವರ್ಮ ಚಂಪೂಯುಗದ/ಪಂಪಯುಗದ ಆಗಮಿಕ ಕಾವ್ಯ ಪರಂಪರೆಗೆ ಒಲಿಯದೆ,